**<u>ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,</u>**

**<u>ದಾಂಡೇಲಿ</u>**

**<u>ಸಿ.ಸಿ ನಂಃ 3105/2021</u>**

**ಪಿರ್ಯಾದಿದಾರರುಃ ಕರ್ನಾಟಕ ಸರ್ಕಾರದ ಪರವಾಗಿ ದಾಂಡೇಲಿ ಗ್ರಾಮೀಣ ಪೊಲೀಸ್ ಠಾಣೆ**

**-ವಿರುದ್ಧ -**

**ಆರೋಪಿಃ ಮೋತಿನ ಯಾನೆ ಬಾಬು ತಂಃ ಭೀಮರಾವ ಗಾಬ್ರೇಕರ್**

ವಯಸ್ಸುಃ 42 ವರ್ಷ, ಉದ್ಯೋಗಃ ಕೂಲಿ ಕೆಲಸ್

ಸಾಃ ಚರ್ಚಗಲ್ಲಿ, ಬಾಗವತಿ, ಹಳಿಯಾಳ (ಉ.ಕ)

**ಆಪಾದನೆ**

**ಶ್ರೀಮತಿ. ತೇಜಸ್ವಿನಿ ಸೊಗಲದ** ಪ್ರ.ದ.ನ್ಯಾ..ದಂಡಾಧಿಕಾರಿಗಳು, ದಾಂಡೇಲಿ ಆದ ನಾನು ನಿಮ್ಮ ಮೇಲೆ ಮಾಡುವ ಆಪಾದನೆ ಇಂತಿದೆಃ

ದಿನಾಂಕಃ 17-03-2021 ರಂದು 09-15 ಗಂಟೆಯ ಸುಮಾರಿಗೆ ದಾಂಡೇಲಿ ಗ್ರಾಮೀಣ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಜೋಯಿಡಾ ತಾಲೂಕಿನ ಜನತಾ ಕಾಲೋನಿ ಗ್ರಾಮಕ್ಕೆ ಸಂಬಂದಸಿಪಡುವ ಜನತಾ ಕಾಲೋನಿ ಗ್ರಾಮದಿಂದ ಪಣಸೋಲಿ ಕಡೆಗೆ ಹೋಗುವ ಕ್ರಾಸ್ ಹತ್ತಿರದ ಸ್ಥಳದಲ್ಲಿ ಆರೋಪಿಯಾದ ನೀವು ಗಾಂಜಾ ಮಾದಕ ವಸ್ತುವನ್ನು ತನ್ನ ಲಾಭಕ್ಕಾಗಿ ಮಾರಾಟ ಮಾಡುತ್ತಿದ್ದಾಗ 274 ಗ್ರಾಮ್ ತೂಕದ ಒಣಗಿದ 24 ಗಾಂಜಾ ಮಾದಕ ಪದಾರ್ಥಗಳು ಇರುವ ಚೀಟಿಗಳು ಅದರ ಅಂದಾಜು ಮೊತ್ತ ರೂ.6,000/- ಮತ್ತು ಗಾಂಜಾ ಮಾರಾಟದಿಂದ ಸಂಗ್ರಹಿಸಿದ ರೂ.300/- ನಗದು ಹಣದೊಂದಿಗೆ ಸಿಕ್ಕಿ ಬಿದಿದ್ದು, ಈ ಮೂಲಕ ಕಲಂ 8(c), 20(b), (ii) (A), NDPS ಕಾಯ್ದೆ 1985 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ ಎಂದು ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

ಈ ಮೇಲ್ಕಂಡ ಅಪರಾಧಗಳಿಗಾಗಿ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಿರ್ದೇಶಿಸಲಾಗಿದೆ.

**ಪ್ರಶ್ನೆಃ 1:** ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ?

**ಉತ್ತರಃ ತಿಳಿಯಿತು**

**ಪ್ರಶ್ನೆಃ 2:** ಈ ಆರೋಪಣೆಯ ಬಗ್ಗೆ ನೀವು ನಿಮ್ಮ ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ ?

**ಉತ್ತರಃ ತಪ್ಪಾಯಿತು**

(ಈ ಆರೋಪಣೆಯನ್ನು ಆರೋಪಿತನಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿ, ವಿವರಿಸಿ, ನಂತರ ಅವರಿಂದ ಉತ್ತರ ಪಡೆದು ದಾಖಲಿಸಿದ್ದೇನೆ)

ಸ್ಥಳಃ ದಾಂಡೇಲಿ

ದಿನಾಂಕಃ13-03-2026 **ಸಹಿ ಇದೆ/-**

**ಪ್ರ.ದ.ನ್ಯಾ..ದಂಡಾಧಿಕಾರಿಗಳು, ದಾಂಡೇಲಿ**